# ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ. ಹೆಚ್.ಎಸ್. ಗೋಪಿನಾಥ್ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನಾ ಪತ್ರಕ್ಕೆ ಸರ್ಕಾರದ ಹೇಳಿಕೆ.

ವಿಷಯ: -

ಪಿ.ಹೆಚ್.ಡಿ. ಪ್ರವೇಶ ಉತ್ತರಿಸದ ಉತ್ತರ ವಿಶ್ವವಿದ್ಯಾಲಯ ಶೀರ್ಷಿಕೆ ಅಡಿಯಲ್ಲಿ ವಿಜಯವಾಣಿ ಪತ್ರಿಕೆಯಲ್ಲಿ ಪ್ರಕಟವಾದ ಪಿ.ಹೆಚ್.ಡಿ. ಪ್ರವೇಶಾತಿಗೆ ಅರ್ಜಿ ಆಹ್ವಾನಿಸಿ ವರ್ಷ ಕಳೆದರೂ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆ ನಡೆಸದೆ ನಿರ್ಲಕ್ಷ್ಯತೋರಿಸುವ ಪರಿಣಾಮ ಆಕಾಂಕ್ಷಿಗಳು ಜಾತಕ ಪಕ್ಷಿಯಂತೆ ಕಾಯುವಂತಾಗಿದೆ. ಸಾಮಾನ್ಯವಾಗಿ ಅರ್ಜಿ ಆಹ್ವಾನಿಸಿದ ಎರಡು ಅಥವಾ ಮೂರು ತಿಂಗಳಲ್ಲಿ ಪ್ರವೇಶ ಪರೀಕ್ಷೆ ನಡೆಸಿ ಪಿ.ಹೆಚ್.ಡಿ ಕೋರ್ಸುಗಳಿಗೆ ಪ್ರವೇಶ ಕಲ್ಪಿಸಲಾಗುತ್ತದೆ. ಆದರೆ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಮಾತ್ರ ಅರ್ಜಿ ಆಹ್ವಾನಿಸಿ ಸಮ್ಮನಾಗಿದೆ. ಅರ್ಜಿಸಲ್ಲಿಸಿರುವ ಅಭ್ಯರ್ಥಿಗಳು ಹತ್ತಾರು ಬಾರಿ ಈ ಬಗ್ಗೆ ಪ್ರಶ್ನಿಸಿದರೂ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಮಾತ್ರ ಸ್ಪಷ್ಟನೆ ನೀಡದೆ ಸಿದ್ಧ ಉತ್ತರಗಳನ್ನುನೀಡುವ ಮೂಲಕ ಜಾರಿ ಕೊಳ್ಳುವ ಪ್ರಯತ್ನ ಮಾಡುತ್ತಿದೆ.

ಇದರಿಂದ ಅಭ್ಯರ್ಥಿಗಳು ಬೇಸತ್ತಿದ್ದು ಪರೀಕ್ಷೆ ಮಾಡುತ್ತೀರಾ ಇಲ್ಲವಾ? ಎಂಬುದನ್ನು ಸ್ಪಷ್ಟಪಡಿಸಿ ಸುಮ್ಮನೆ ಕಾಲಹರಣ ಮಾಡಬೇಡಿ, ಪ್ರವೇಶ ಪರೀಕ್ಷೆ ನಡೆಸಲು ಇರುವ ಸಮಸ್ಯೆಯಾದರೂ ಏನು? ಎಂಬ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಇದಕ್ಕೆ ವಿಶ್ವವಿದ್ಯಾಲಯ ಮಾತ್ರ ಇಲ್ಲಿಯವರೆಗೂ ಸರಿಯಾದ ಉತ್ತರ ನೀಡಿಲ್ಲ ಎಂದು ಅಭ್ಯರ್ಥಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ. 2023ರ ಫೆಬ್ರುವರಿ 8 ರಂದು 2022 ಮತ್ತು 23ನೇ ಸಾಲಿನ ಪಿ.ಹೆಚ್.ಡಿ. ಪದವಿ (ಪೂರ್ಣಕಾಲಿಕ ಮತ್ತು ಅರೆಕಾಲಿಕ) ಪ್ರವೇಶಾತಿಗೆ ವಿಶ್ವವಿದ್ಯಾಲಯ ಅಧಿಸೂಚನೆ ಹೊರಡಿಸಿತ್ತು. ರಸಾಯನಶಾಸ್ತ್ರ, ವಾಣಿಜ್ಯಶಾಸ್ತ್ರ, ಗಣಕವಿಜ್ಞಾನ, ಅರ್ಥಶಾಸ್ತ್ರ, ಇಂಗ್ಲೀಷ್, ಕನ್ನಡ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಸೇರಿ ವಿವಿಧ 29 ವಿಷಯಗಳು ಅರ್ಜಿ ಆಹ್ವಾನಿಸಿತು. ಅರ್ಜಿಸಲ್ಲಿಸಲು 2023ರ ಫೆಬ್ರುವರಿ 28 ಕೊನೆಯ ದಿನವಾಗಿತ್ತು. ಆದರೆ ಇಲ್ಲಿಯವರೆಗೂ ಯಾವುದೇ ಪರೀಕ್ಷೆ ಕೈಗೊಂಡಿಲ್ಲ. ಪಿ.ಎಚ್.ಡಿ ಪ್ರವೇಶ ಕೋರಿ 178 ಜನರಿಗೆ ಅರ್ಜಿಸಲ್ಲಿಸಲು ಅವಕಾಶವಿದ್ದು, ಇದಕ್ಕೆ ವಿಶ್ವವಿದ್ಯಾಲಯ ಮೂಲಗಳ ಪ್ರಕಾರ ಅಂದಾಜು 8,000 ಅರ್ಜಿಗಳು ಸಲ್ಲಿಕೆಯಾಗಿದೆ ಎಂದು ತಿಳಿದುಬಂದಿದೆ. ಪ್ರತಿಯೊಬ್ಬರು 250 ಗಳಂತೆ ಶುಲ್ಕ ಸಂಗ್ರಹಿಸಲಾಗಿದೆ. ಕನಿಷ್ಠ 20 ಲಕ್ಷ ರೂಪಾಯಿ ಶುಲ್ಕ ಸಂಗ್ರಹವಾಗಿದೆ ಆದರೆ ನಮಗೆ ಮಾತ್ರ ಅನ್ಯಾಯವಾಗಿದೆ ಎಂದು ಅಭ್ಯರ್ಥಿಗಳು ಅಳಲುತೋಡಿಕೊಂಡಿದ್ದಾರೆ. ಆದ ಕಾರಣ ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಅತಿಶೀಘ್ರದಲ್ಲಿ ಪ್ರವೇಶಾತಿ ಪರೀಕ್ಷೆಯನ್ನು ನಡೆಸಲು ಸರ್ಕಾರವು ವಿಶ್ವವಿದ್ಯಾಲಯಕ್ಕೆ ಸೂಕ್ತ ನಿರ್ದೇಶನ ನೀಡಬೇಕೆಂದು ಸರ್ಕಾರವನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

ಉತ್ತರ : -

ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ಪಿ.ಹೆಚ್.ಡಿ ಪ್ರವೇಶಕ್ಕಾಗಿ ದಿನಾಂಕ: 18.10.2022 ರಂದು ಸಂಶೋಧನಾ ಕೇಂದ್ರಗಳ ನವೀಕರಣ ಮತ್ತು ಹೊಸ ಸಂಶೋಧನಾ ಕೇಂದ್ರಗಳ ಗುರುತಿಸುವಿಕೆ ಸಂಬಂಧವಾಗಿ ಅಧಿಸೂಚನೆ ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸಿ, ಒಂದು ತಿಂಗಳ ಅವಧಿಯನ್ನು ನೀಡಲಾಗಿತ್ತು. ಆದರೆ ಅರ್ಜಿಗಳು ಕಡಿಮೆ ಪ್ರಮಾಣದಲ್ಲಿ ಬಂದಿರುವುದರಿಂದಾಗಿ ಮತ್ತ ಪರಿಷ್ಕೃತ ಅಧಿಸೂಚನೆಯನ್ನು ದಿನಾಂಕ: 03.05.2023 ರಂದು

CamScanner

ಹೊರಡಿಸಲಾಗಿತ್ತು. ಆನಂತರ ಬಂದ ಅರ್ಜಿಗಳನ್ನು ಪರಿಗಣಿಸಿ ಎಲ್ಲಾ ಸಂಶೋಧನಾ ಕೇಂದ್ರಗಳಿಗೆ ವಿಷಯ ತಜ್ಞರ ಸಮಿತಿಗಳು ಕಾಲೇಜುಗಳಿಗೆ ಭೇಟಿ ನೀಡಿ 09 ಸಂಶೋಧನಾ ಕೇಂದ್ರಗಳ ಮಾರ್ಗದರ್ಶಕರ ಅರ್ಜಿಗಳನ್ನು ಪರಿಶೀಲಿಸಲು ಸಮಿತಿಗಳನ್ನು ರಚಿಸಿ ನಂತರ ಅವರ ವಿದ್ಯಾರ್ಹತೆಯ ಆಧಾರ ಮೇಲೆ ಮಾರ್ಗದರ್ಶಕರನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಮಾಡಿದ ನಂತರ ವಿದ್ಯಾವಿಷಯಕ ಪರಿಷತ್ತು ಮತ್ತು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಪಡೆಯಲಾಗಿರುತ್ತದೆ. ನಂತರ ಸಂಶೋಧನಾ ಕೇಂದ್ರಗಳು ಆದೇಶದ ಪ್ರತಿಗಳನ್ನು ನೀಡಿರುತ್ತವೆ. ಮಾರ್ಗದರ್ಶಕರನ್ನು ಆಯ್ಕೆ ಮಾಡಿದ ಸಮಿತಿಯನ್ವಯ ದಿನಾಂಕ: 28.11.2023 ರಿಂದ ಮಾರ್ಗದರ್ಶಕರಿಗೆ ಆದೇಶ ಪ್ರತಿಗಳನ್ನು ನೀಡಲಾಗಿರುತ್ತದೆ.

ಮುಂದುವರೆದು, ಬೆಂಗಳೂರು ವಿಶ್ವವಿದ್ಯಾಲಯ ತ್ರಿಭಜನೆಗೊಂಡ ನಂತರ ಉತ್ತರ ವಿಶ್ವವಿದ್ಯಾಲಯವು ನೂತನವಾಗಿ ಪ್ರಾರಂಭವಾಗಿರುವುದರಿಂದ ಇಲ್ಲಿ ಖಾಯಂ ಅಧ್ಯಾಪಕರ ಕೊರತೆ ಇರುತ್ತದೆ ಹಾಗೂ ಪಿ.ಹೆಚ್.ಡಿ ಪಠ್ಯಕ್ರಮವು ಲಭ್ಯವಿಲ್ಲದಿರುವುದರಿಂದ ಯುಜಿಸಿ ನಿಯಮಾವಳಿಯಂತೆ ಪಠ್ಯಕ್ರಮವನ್ನು ಸಿದ್ಧಪಡಿಸಿಕೊಳ್ಳಲು 02 ತಿಂಗಳ ಸಮಯವನ್ನು ತೆಗೆದುಕೊಂಡಿರುತ್ತದೆ. ಆಯ್ಕೆಯಾದ ಮಾರ್ಗದರ್ಶಕರು ಒಟ್ಟು ಸೀಟು ಸಂಖ್ಯೆ: 178 ಹಂಚಿಕೆಯನ್ನು ವಿದ್ಯಾವಿಷಯಕ ಸಭೆ ಮತ್ತು ಸಿಂಡಿಕೇಟ್‌ಸಭೆಯ ಅನುಮೋದನೆಯನ್ನು ಪಡೆಯಲು 02 ತಿಂಗಳ ಕಾಲಾವಕಾಶ ಪಡೆದಿರುತ್ತದೆ. ಈಗಾಗಲೇ ಪ್ರಶ್ನೆ ಪತ್ರಿಕೆಗಳು ಸಿದ್ಧಪಡಿಸಲಾಗಿದ್ದು, ಮಾರ್ಚ್ 2024 ರ ತಿಂಗಳಲ್ಲಿ ಪರೀಕ್ಷೆಯನ್ನು ನಡೆಸಲಾಗುತ್ತದೆ. ಈ ಎಲ್ಲಾ ಪ್ರಕ್ರಿಯೆಗಳು ಯುಜಿಸಿ ನಿಯಮಾವಳಿಯಂತೆ ಕೈಗೊಳ್ಳಬೇಕಾಗಿರುವುದರಿಂದ ಸಮಯ ತೆಗೆದುಕೊಂಡಿರುತ್ತದೆ.

**ಇಡಿ/63/ಯುಬಿವಿ/2024**

**(ಡಾ|| ಎಂ.ಸಿ. ಸುಧಾಕರ್)**

ಉನ್ನತ ಶಿಕ್ಷಣ ಇಲಾಖೆ, ಸಚಿವರು.

CamScanner